



## ಹೆಸರು

ಅಪಘಾತಕ್ಕೀಡಾದ ಸಂತಾನನ್ನು ಕಂಡ ದಾರಿಹೋಕರೊಬ್ಬರು ವಿಚಾರಿಸಿದರು; 'ನಿಮಗೆ ತುಂಬಾ ಏಟಾಗಿರುವಂತಿದೆ, ನಿಮ್ಮ ಹೆಸರೇನೆಂದು ಹೇಳಿದರೆ ನಿಮ್ಮ ಮನೆಯವರಿಗೆ ತಿಳಿಸುತ್ತೇನೆ.'
ಸಂತಾ: ಅದರ ಅವಶ್ಯಕತೆಯಿಲ್ಲ, ಅವರಿಗೆ ನನ್ನ ಹೆಸರು ತಿಳಿದಿದೆ...!

## ಅಭಿರುಚಿ

ಜನರ ಅಭಿರುಚಿ ಎಷ್ಟೊಂದು ವಿಭಿನ್ನವಾಗಿದೆ ಅಲ್ಲವೇ? ಓದಲು ಖಾಸಗಿ ಶಾಲೆ ಬೇಕೆಂದು ಹಠ ಹಿಡಿಯುವ ಮಂದಿ ಉದ್ಯೋಗ ಸರಕಾರಿ ಕಚೇರಿಯಲ್ಲೇ ಲಭಿಸಬೇಕೆಂದು ಆಶಿಸುತ್ತಾರೆ!

## ಸುಳ್ಳು

ವಿವಾಹಿತ ಪುರುಷನೋರ್ವ ಚೆಲುವೆ ಸೆಕ್ರೆಟರಿಯ ಜೊತೆ ಸುತ್ತಾಡಿ ರಾತ್ರಿ 8 ಗಂಟೆಗೆ ಮನೆಗೆ ಹಿಂತಿರುಗುವಾಗ ತನ್ನ ಶೂಸ್ ಮತ್ತು ಬಟ್ಟೆಗಳಿಗೆ ಧೂಳು ಹಾಗೂ ಹುಲ್ಲಿನ ತುಣುಕುಗಳನ್ನು ಮೆತ್ತಿಕೊಂಡು ತಲುಪಿದ...
ಪತ್ನಿ: ಇಷ್ಟು ತಡವೇಕೆ ಆಯಿತು, ಈವರೆಗೆ ಎಲ್ಲಿದ್ದಿರಿ?
ಪತಿ: ನಿನ್ನಲ್ಲಿ ನಾನು ಸುಳ್ಳು ಹೇಳಲಿಚ್ಛಿಸುವುದಿಲ್ಲ; ನನಗೊಬ್ಬಳು ಪ್ರೇಯಸಿಯಿದ್ದಾಳೆ ಹಾಗೂ ಅವಳೊಡನೆ ತಿರುಗಾಡಿ ಈಗಷ್ಟೇ ಮರಳುತ್ತಿದ್ದೇನೆ.
ಪತ್ನಿ (ಕಿರುಚುತ್ತಾ): ನಾಚಿಕೆಯಾಗುವುದಿಲ್ಲವೇ ನಿಮಗೆ, ಕ್ರಿಕೆಟ್ ಆಟವಾಡಿ ಬಂದು ಹೀಗೆಲ್ಲಾ ಸುಳ್ಳು ಹೇಳಲು?

## ಪರಿಹಾರ

ರಾಮು: ನಾನು ಏನೇ ಕೆಲಸ ಮಾಡುತ್ತಿದ್ದರೂ ನನ್ನ ಹೆಂಡ್ತಿ ನಡುವೆ ಬಂದು ಬಿಡುತ್ತಾಳೆ.
ಗೋಪಿ: ಹಾಗಾದರೆ ನೀನೊಂದು ಟ್ರಕ್ ಚಲಾಯಿಸಿ ನೋಡು, ನಿನ್ನ ಅದೃಷ್ಟ ಒಲಿದರೂ ಒಲಿಯಬಹುದು...!

## ವರ್ತನೆ

ಪುರುಷರು ವಿವಾಹ ನಂತರ ಮದುವೆಗೆ ಮುಂಚಿನಂತೆ ವರ್ತಿಸುತ್ತಿದ್ದರೆ ಅರ್ಧದಷ್ಟು ವಿಚ್ಛೇದನಗಳು ನಡೆಯುತ್ತಿರಲಿಲ್ಲ. ಸ್ತ್ರೀಯರು ಮದುವೆಗಿಂತ ಮುಂಚೆ ವಿವಾಹಾ ನಂತರದ ರೀತಿ ವರ್ತಿಸುತ್ತಿದ್ದರೆ ಅರ್ಧದಷ್ಟು ಮದುವೆಗಳೂ ನಡೆಯುತ್ತಿರಲಿಲ್ಲ!

## ಕೈಬರಹ

ಮೆಡಿಕಲ್ ಶಾಪಿನ ಹೊರಗೆ ಯುವತಿಯೋರ್ವಳು ತಾಳ್ಮೆಯಿಂದ ಕಾಯುತ್ತಿದ್ದಳು. ಅವಳನ್ನು ಗಮನಿಸಿದ ಅಂಗಡಿಯಾತ ಕೇಳಿದ, 'ಏನು ಬೇಕಿತ್ತು?'
ಆಕೆ ಉತ್ತರಿಸಿದಳು, 'ನನ್ನ ಭಾವೀ ಪತಿ ಬರೆದಿರುವ ಈ ಪತ್ರವನ್ನು ನೀವು ಓದಿ ಹೇಳಬಲ್ಲಿರಾ? ನನ್ನಿಂದ ಓದಲು ಸಾಧ್ಯವಾಗುತ್ತಿಲ್ಲ, ಏಕೆಂದರೆ ಅವರೊಬ್ಬ ಡಾಕ್ಟರ್...!

## ಜನಪ್ರಿಯತೆ

ರಾಮು: ಫೇಸ್ ಬುಕ್ ಏಕೆ ಇಷ್ಟೊಂದು ಜನಪ್ರಿಯವಾಗಿದೆ?
ಗೋಪಿ: ಏಕೆಂದರೆ, ಜನರು ತಮ್ಮ ಸ್ವಂತ ಜೀವನಕ್ಕಿಂತ ಬೇರೆಯವರ ಜೀವನದ ಬಗ್ಗೆ ಆಸಕ್ತಿ ಹೊಂದಿರುತ್ತಾರೆ!



## ವಿಳಂಬ

ರತ್ನಾ: ನನ್ನ ಮರಣಾನಂತರ ನೀವು ನನ್ನ ನೆನಪಿಗಾಗಿ ತಾಜ್‌ಮಹಲ್ ಕಟ್ಟಿಸುವಿರಾ?
ಗೋಪಿ: ನಾನೀಗಾಗಲೇ ಆಗ್ರಾದಲ್ಲೊಂದು ನಿವೇಶನ ಖರೀದಿಸಿಟ್ಟಿರುವೆ; ವಿಳಂಬವಾಗುತ್ತಿರುವುದು ನಿನ್ನ ಕಡೆಯಿಂದಲೇ ಕಣೆ...!

-ರಮಣ್ ಶೆಟ್ಟಿ ರೇಂಜಾಳ್, ಮುಂಬೈ




